Regd No BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಅಂಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

4—1—1962

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಪ್ರಭುಗಳಿಂದ ದೇವರ ದರ್ಶನ

ವಿಶಾಖಪಟ್ಟಣದ ಸಿಂಹಾಚಲ ದೇವಾಲಯಕ್ಕೆ ಮೈಸೂರು ಶ್ರೀವನ್ಮಹಾರಾಜರವರು ಮತ್ತು ಶ್ರೀಮನ್ಮಹಾರಾಣಿಯವರು ಹೋಗಿದ್ದರು. ರಾಜೋಚಿತ ಸ್ವಾಗತದೊಡನೆ ಅವರನ್ನು ಪೂಜಾರಿಯವರು ಸ್ವಾಗತಿಸಿದರು.

ಕೇಂದ್ರದ ನೆರವು

ಒರಿಸ್ಸಾ ರಾಜ್ಯದ ಮಳೆ ಬೀಳದ ಪ್ರದೇಶಗಳ ಪರಿಹಾರಕ್ಕಾಗಿ ಭಾರತದ ಜನಗಳ ಕ್ಷಾಮ ನಿಧಿಯಿಂದ ಕೇಂದ್ರ ಆಹಾರ ಮಂತ್ರಿ ಶ್ರೀ ಎಸ್ ಕೆ ಪಾಟೀಲರು ರೂ 20 ಸಾವಿರ ಕೊಟ್ಟಿದ್ದಾರೆ

೦೦

ಚುನಾವಣೆಯಲ್ಲಿ ಕಾಂಗ್ರೆಸು ಪಕ್ಷವನ್ನು ಗೆಲ್ಲಿಸುವಂತೆ ತಮಿಳುನಾಡಿನಲ್ಲಿ ಇತ್ತೀಚಿಗೆ ಭೇಟಿ ಇತ್ತ ಕೇಂದ್ರ ಉಪ ಮಂತ್ರಿ ಎಂ. ವಿ ಕೃಷ್ಣಪ್ಪನವರು ಕಾಂಗ್ರೆಸು ಕಾರ್ಯಕರ್ತರಿಗೆ ತಿಳಿಸಿದರು. ಕೃಷ್ಣಪ್ಪನವರು ಭೇಟಿ ಇತ್ತನಂತರ ಕಾಂಗ್ರೆಸಿಗರಲ್ಲಿ ಒಂದು ಸಮಾಧಾನವುಂಟಾಗಿದೆ ಎಂದು ಗೊತ್ತಾಗಿದೆ.

ತುಮಕೂರಿನ ಪ್ರಸಿದ್ಧ ಕಾಂಗ್ರೆಸಿಗರಾದ ಡಾ|| ಟಿ ಎಸ್. ಮಲ್ಲಿಕಾರ್ಜುನಪ್ಪನವರು ಕಾಂಗ್ರೆಸಿಗೆ ರಾಜೀನಾಮೆ ಬರೆದಿರುವರು ಮುಂದಿನ ಚುನಾವಣೆಗಾಗಿ ಕಾಂಗ್ರೆಸು ಅಭ್ಯರ್ಥಿಗಳ ಆಯ್ಕೆ ಅವರಿಗೆ ತೃಪ್ತಿ ಇಲ್ಲ. ವಿಧಾನಸಭೆಗೆ ಅವರು ಸ್ವತಂತ್ರವಾಗಿ ಸ್ಪರ್ಧಿಸುವ ಸಂಭವವಿದೆ

ಪದ್ಮಾಸು ಸರ್ಕಾರದ ಗಣಿತ ವಿಜ್ಞಾನ ಸಂಸ್ಥೆಯನ್ನು ಡಾ|| ಚಂದ್ರಶೇಖರು ನಿನ್ನೆ ಉದ್ಘಾಟಿಸಿದರು

ಸಂಯುಕ್ತ ಅಂಬ್ ಗಣರಾಜ್ಯದಲ್ಲಿ ರಷ್ಯದ ನೆಲೆ ಸ್ಥಾಪನೆ ಕುರಿತು ಮಾತುಕತೆ ನಡೆದು ಎಂಬ್ಬಾಬುದನ್ನು ದೆಹಲಿಯು ಅಂಬ್ ಗಣರಾಜ್ಯದ ರಾಯಭಾರಿ ಕಚೇರಿಯು ನಿರಾಕರಿಸಿದೆ

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ್ ಜೋಯಿಸರಿಂದ

5 ಚತುರ್ದಶಿ ಮೂಲ

ಮಾತುಕತೆ ವಿಫಲ

ಮೈಸೂರು – ಮಹಾರಾಷ್ಟ್ರ ಗಡಿ ಕಲಹ ಪರಿಶೀಲಿಸಲು ನೇಮಕವಾಗಿರುವ ಸಮಿತಿ ಮೊನ್ನೆ ಯಾನ ಒಪ್ಪಂದಕ್ಕೆ ಬರುವದರಲ್ಲೂ ವಿಫಲವಾಯಿತೆಂದು ಬೊಂಬಾಯಿನಿಂದ ವಾರ್ತೆ ಬಂದಿದೆ ಫೆಬ್ರವರಿ ಕೊನೆಗುಲ್ಲಿ ಸಮಿತಿ ವರದಿಯನ್ನು ತಯಾರಿಸಲು ಪ್ರಯತ್ನಿಸುವದಾಗಿ ಸಮಿತಿಯ ಅಧ್ಯಕ್ಷರಾದ ಶ್ರೀ ಪಟಾಸ್ಕರರು ತಿಳಿಸಿದ್ದಾರೆ.

ಸಾಂಕೇತಿಕ ಮುಷ್ಕರ

ವಿಷ್ಣು ನಡೆಯುತ್ತಿರುವ ಕೊಲಂಬೋ ದೇವಿನಿಂದ ಸೇನಾ ಕೆಲಸಗಾರರನ್ನು ತೆಗೆಯದೆ ಇದ್ದರೆ ನಾಳೆ ಸಂಕೇತ ಸೂಚಕವಾಗಿ ಮುಷ್ಕರ ಹೂಡಬೇಕೆಂಬುದಾಗಿ ಟ್ರೇಡ್ ಯೂನಿಯನ್‌ಗಳು ಕರೆ ಇತ್ತಿರುವದನ್ನು ಎದುರಿಸಲು ಸರ್ಕಾರ ಸಿದ್ಧವಿದೆ.

ಪ್ರಯೋಜನವಿಲ್ಲದ ಪ್ರಯತ್ನ

ಗಡಿ ನಗರವಾದ ಪೂಂಚ್‌ನಲ್ಲಿ ಕಾಶ್ಮೀರ ಮುಖ್ಯ ಮಂತ್ರಿ ಶ್ರೀ ಭಕ್ಷಿ ಗುಲಾಂ ಮಹಮದ್‌ರು ಭಾಷಣಮಾಡುತ್ತಾ, ಭಾರತದ ವೇಲೆ ಕೆಲವು ಪಾಶ್ಚಾತ್ಯ ರಾಷ್ಟ್ರಗಳು ದ್ವೇಷವನ್ನು ಪಡೆದಿರುವದರಿಂದ ಉಪಯೋಗ ಕೊಂದಿ ಭದ್ರತಾ ಸಮಿತಿಯಲ್ಲಿ ಕಾಶ್ಮೀರ ಪ್ರಶ್ನೆ ಎತ್ತಲು ಪಾಕಿಸ್ತಾನ ಪ್ರಯತ್ನಿಸುತ್ತಿದೆ ಎಂದರು ಆದರೆ ಅದು ಪ್ರಯೋಜನವಿಲ್ಲ, ಪಾಕಿಸ್ತಾನ ಆಕ್ರಮಿಸಿರುವ ಪ್ರದೇಶವನ್ನು ಬಿಟ್ಟುಹೋಗಬೇಕು ಎಂದರು

೦೦

ಹಾಸನದಲ್ಲಿ ಹರಿಜನ ಸಮ್ಮೇಳನವನ್ನು ಉಪ ಗೃಹ ಮಂತ್ರಿ ಶ್ರೀ ಬಿ ಬಸವಲಿಂಗಪ್ಪನವರು ಆರಂಭಗೊಳಿಸಿದರು

ಭಾರತದ 16 ರಾಜಕೀಯ ಪಕ್ಷಗಳಿಗೆ ಚುನಾವಣೆ ಪ್ರಸಾದ ಅರ್ಹತೆ ದೊರೆತಿವೆ ಕಾಂಗ್ರೆಸು, ಪಿಎಸ್ಪಿ, ಕಮ್ಯೂನಿಸ್ಟು, ಸೋಷಲಿಸ್ಟು, ಜನಸಂಘ, ಸ್ವತಂತ್ರ ಪಕ್ಷ ಮುಂತಾದುವು

ನ್ಯೂಯಾರ್ಕಿನಲ್ಲಿ 6400 ಬಸ್ ಡ್ರೈವರುಗಳು ಮುಷ್ಕರ ಹೂಡಿದ್ದಾರೆ.

ರಾಜ್ಯಾಂಗದ ತಿದ್ದುಪಡಿ
ಕೇರಳದ ಪ್ರಯತ್ನ

ಕೇರಳ ಭೂ ಶಾಸನ ಜಾರಿ ಮಾಡಲು ಅನುಕೂಲವಾಗುವಂತೆ ಭಾರತ ಘಟನೆಯ 31–ಎ ವಿಧಿಯನ್ನು ತಿದ್ದುಪಡಿ ಮಾಡುವಂತೆ ಕೇಂದ್ರ ಸರ್ಕಾರವನ್ನು ಕೇರಳ ಸರ್ಕಾರ ಕೇಳುವ ನಿರೀಕ್ಷೆ ಇದೆ ಎಂದು ತಿರುವೇಂದ್ರಂ ವಾರ್ತೆ. ಶೈತವಾರಿ ಪದ್ಧತಿಗೆ ಕಾನೂನು ಅನ್ವಯಿಸುವದಿಲ್ಲ ಎಂದು ಸುಪ್ರೀಂ ಕೋರ್ಟು ಇತ್ತೀಚಿಗೆ ತೀರ್ಪಿತ್ತಿದ್ದರಿಂದ

ಮಗ ಪತ್ತೆ ಇಲ್ಲ !

ನಿದ್ದೆ ಬರುವ ಹೆಚ್ಚಳವನ್ನು ಸೇವಿಸಿ ಕಳೆದ ಮಾಹೆ 13 ರಂದು ವಿಯನ್ನ ದಲ್ಲಿ ಭಾರತದ ರಾಜತಾಂತ್ರಿಕ ಶ್ರೀ ಅಜಯ್ ಕುಮಾರ್ ವಿಸ್ಸರ್ ಮರಣಹೊಂದಿದಂಷ್ಟೆ ಅವರ ಕೊಲೆ ಸಂಭವಿಸಿರಬಹುದೆಂಬ ಸಂಶಯ ಬಲವಾಗುತ್ತಿದೆ. ಡಿಸೆಂಬರ್ 12 ರಂದು ಮಾಯವಾದ ಅವರ ಮಗ ಮೊನ್ನೆಯವರೆಗೆ ಪತ್ತೆ ಇಲ್ಲ.

ಕೋರಿಕೆ ಬಂದಿಲ್ಲ

ಪೋರ್ಚುಗೀಸು ಸೇನಿಕರನ್ನು ವಾಪಸು ಕಳಿಸುವಂತೆ ಭಾರತ ಸರ್ಕಾರಕ್ಕೆ ಪೋರ್ಚುಗಲ್‌ನಿಂದ ಕೋರಿಕೆ ಬಂದಿಲ್ಲ.

ಭಾರತದಲ್ಲಿ ಜಪಾನ್ ತಂಡ

ಭಾರತದ ಆಹಾರ ಅಭ್ಯಾಸದ ಪರಿಶೀಲನೆಗೆ ಜಪಾನಿನ ವ್ಯವಸಾಯ ಮಂತ್ರಿ ಶಾಖೆಯ ತಾಂತ್ರಿಕ ತಜ್ಞ ಶ್ರೀ ತಿನ್ಯನಿಶಿ ಮಾರು ನೇತೃತ್ವದಲ್ಲಿ ತಂಡವೊಂದು ಕಲ್ಕತ್ತಾಕ್ಕೆ ಬಂದಿದೆ ಜಪಾನಿನಲ್ಲಿ ತಯಾರಾದ ಎರಡು ಮೋಟಾರಿನಲ್ಲಿ ಭಾರತದಲ್ಲಿ ಸುಮಾರು ತಿಂಗಳು ಪ್ರವಾಸ ಮಾಡುವರು

ಲಯೋನ್ಸ್ ಅಧಿಕಾರಿ

ಮೈಸೂರಿನ ಕೇಂದ್ರ ಆಹಾರ ಸಂಶೋಧನಾಲಯದ ನೌಕರಿಯನ್ನು ದ್ವೇಷಿಸಿ ಆಬ್ಯಾರಿ ಪಂತಿ ಶ್ರೀ ವೀರೇಂದ್ರಪಾಟೀಲರು ಮಾತನಾಡುತ್ತಾ, ರಾಜ್ಯ ಲಯೋನ್ಸ್ ಅಧಿಕಾರಿ ಇರಬೇಕೆಂದು ಡಾ|| ವಿ ಸುಬ್ರಹ್ಮಣ್ಯರು ಮಾಡಿರುವ ಸಲಹೆಯನ್ನು ಮುಂತ್ರಿ ಮಂಡಲದ ಸಭೆಯಲ್ಲಿ ಪ್ರಸ್ತಾಪಿಸುವದಾಗಿ ತಿಳಿಸಿದರು.

ಸಂಬಂಧ ಹೋಗಬಹುದು

ಗೋವಾವನ್ನು ಭಾರತ ವಶಪಡಿಸಿಕೊಂಡ ಕಾರಣ ಪೋರ್ಚುಗಲ್ ಬಿಟ್ಟು ನೆನೊಡನೆ ಸಂಬಂಧ ಕಳೆದುಕೊಳ್ಳಬಹುದೆಂದು ಲಿಸ್ಬನ್ ವಾರ್ತೆ.

ಕಾಫಿ ಟಿ ದಸ್ತಗಿರಿ

ಮೈಸೂರು 3 — ಮೈಸೂರು ಸಗರದ ಕೈಂ ಬ್ರಾಂಚ್‌ರವರು ಅಂಗಡಿ ಹಾಗೂ ಮನೆಗಳ ಕನ್ನ ಹಾಕಿದ ಸಂದರ್ಭದಲ್ಲಿ ಮಹದೇವ ಉರುಫ್ ಕಾಫಿ ಟಿ ಎಂಬ ಕೇಡಿ ಮತ್ತು ಮುನಿಸ್ವಾಮಿ ಉರುಫ್ ಚಿನ್ನಸ್ವಾಮಿ ಎಂಬವರನ್ನ ಬಂಧಿಸಿದ್ದಾರೆ ಹಳ್ಳಿದಕೇರಿಯ ವಕ್ರವರ್ತಿ ಅಂಗಡಿ ಸೇರಿ 6 ಕನ್ನಗಳ್ಳತನಗಳ ಒಗ್ಗೆ ಮಹದೇವ ಜವಾಬ್ದಾರಿ ಆಗಿದ್ದಾನೆ ಸುಮಾರು ರೂ 1500 ಬೆಲೆ ಬಾಳುವ ಚಿನ್ನ, ಬೆಳ್ಳಿ, ಸೂಟು ಮತ್ತು ಶರ್ಟ ಒಟ್ಟಿಗಳು ದೊರೆತಿವೆ ಅವನು ಪೋಲೀಸರ ವಶದಲ್ಲಿದ್ದಾನೆ ಕೃಷ್ಣರಾಜನಗರದಲ್ಲಿ ಅಂಗಡಿಯ ಬಾಗಿಲು ಕನ್ನಗಳ್ಳತನಕ್ಕೆ ಜವಾಬ್ದಾರಿಯಾದ ಮುನಿಸ್ವಾಮಿ ಉರುಫ್ ಚಿನ್ನಸ್ವಾಮಿ ಇತ್ತ ಸಮಾಚಾರದಂತೆ ರೂ 1 ಸಹಸ್ರ ಹಿತ್ತಾಳೆ ಬೆಲೆ ಬಾಳುವ ಉಲ್ಲನ್ ಬಟ್ಟೆ ವಶಪಡಿಸಿಕೊಂಡಿದೆ

೦೦

ಹೆಚ್ಚು ಸೀಮೆಂಟು ಪುಡಿ ಉಕ್ಕಿನ ಬೇಡಿಕೆ ನೇಪಾಳದಿಂದ ಬಂದಿರುವದನ್ನು ಅನುಕೂಲವಾಗಿ ಪರಿಶೀಲಿಸುವ ಭರವಸೆಯನ್ನು ಭಾರತ ಇತ್ತಿದೆ.

ಬಳ್ಳಾರಿಯ ಹೋಟಲುಗಳೆಲ್ಲ ನಿನ್ನೆ ಹರತಾಳ ಆಚರಿಸಿದವು. ಮಾರಾಟ ತೆರಿಗೆ ಅಧಿಕಾರಿಗಳಿಂದ ತೊಂದರೆ ಆಗ್ತೈವೆಂದು ಪ್ರತಿಭಟಿಸಿ ಈ ಹರತಾಳ.

ವಿಶ್ವದ ಅತ್ಯಂತ ಎತ್ತರದ ಕಟ್ಟಡ

ನ್ಯೂಯಾರ್ಕ್— ವಿಶ್ವದ ಅತ್ಯಂತ ಎತ್ತರವಾದ 'ಸ್ಕೈಲಾರ್ಕ್' ಸ್ಕ್ರೇಪರ್' ಕಟ್ಟಡದ ಮಾಲೀಕತ್ವ ಬದಲಾವಣೆಯಾಯಿತು : ಅದನ್ನು 65 ಮಿಲಿಯ ಡಾಲರುಗಳಿಗೆ ಕೊಂಡುಕೊಂಡ ಪೂ ವೆನ್ಸಿಯ ಲ್ ಇಕ್ವಿಟೇರೆನ್ಸ್ ಕಂಪೆನಿಯು, ಅದನ್ನು 114 ವರ್ಷಗಳಿಗೆ ಗುತ್ತಿಗೆಗೆ ಕೊಡುವುದು ; ಇದಂ ವಾರ್ಷಿಕ ಉತ್ಪತ್ತಿ 12.5 ಮಿಲಿಯ ಡಾಲರುಗಳು.

ಪಕ್ಷಿಗಳಿಗೆ ಗೌರವ

ಐಸ್ಲೆಂಡಿನಲ್ಲಿ ಪಕ್ಷಿಗಳಿಗೆ ಬಹಳ ಗೌರವವಿದೆ ; ಅಲ್ಲಿಯ ಜನರು ಪಕ್ಷಿಗಳು ಸಂಸಾರ ಕಟ್ಟಿಕೊಂಡು ಶಾಂತಿಯಿಂದ ವಾಸಿಸುವ ಹಕ್ಕನ್ನು ಒಪ್ಪಿದ್ದಾರೆ: ಮನ ಪಕ್ಷಿಗಳನ್ನು ನಾಶಮಾಡುವ ಹಕ್ಕು ಮಾನವನಿಗೆ ಇದೆ ಎಂಬುದು ಅವರಿಗೆ ತಿಳಿದೇ ಇಲ್ಲ.

ದೆಹಲಿ ಕ್ಷೇತ್ರದಲ್ಲಿ ಮಕ್ಕಳ ಕಾನೂನು ಅನುಷ್ಠಾನ

ನವದೆಹಲಿ 2— ಕೇಂದ್ರಾಡಳಿತ ಕ್ಷೇತ್ರವಾದ ದೆಹಲಿಯಲ್ಲಿ 1962 ಜನವರಿ 1 ರಿಂದ 1960 1960 ರ ಮಕ್ಕಳ ಕಾನೂನನ್ನು ಅನುಷ್ಠಾನಕ್ಕೆ ತರಲಾಗಿದೆ — ಈ ಹೊಸ ಕಾನೂನು ಹೆಚ್ಚಿನ ಪ್ರಧಾನ್ಯತೆಯನ್ನು ಪಡೆಯುವುದೇ ಕಿಶೋರಾಪರಾಧಿಗಳನ್ನು ತಿದ್ದುವುದು, ಅವರ ಯೋಗಕ್ಷೇಮ ನೋಡಿಕೊಳ್ಳುವುದು, ಅವರ ಶಿಕ್ಷಣ, ಪುನರ್ವಸತಿ ಈ ಮುಂತಾದವನ್ನು ಕೈಗೊಳ್ಳಲು ಹೊಸ ಕಾನೂನಿನಲ್ಲಿ ಅವಕಾಶ ಮಾಡಿಕೊಡಲಾಗಿದೆ.

ಆಕಸ್ಮಿಕಗಳ ಲಾಭಾಲಾಭಗಳು

ಲಂಡನ್ನಿನ ಡಾನಿ ಎಂಬ ಕಿವುಡು ಮೂಗು ಹುಡುಗನು ಈಚೆಗೆ ಒಂದು ಮುಷ್ಟಿಯುದ್ಧದಲ್ಲಿ ಭಾಗವಹಿಸಿದ್ದಾಗ ಕಪೋಲಕ್ಕೆ ಭಾರಿ ಏಟು ತಗುಲಿತು ; ಕೂಡಲೇ ವಾಕ್ ಶಕ್ತಿ ಮತ್ತು ಶ್ರವಣ ಶಕ್ತಿ ಬಂದವು

ಪೈಬಿವಿಲೆಯ ಗೆಟೆಬರ್ಡ್ ಹುಡುಗನಿದ್ದಾಗ ಸೌದೆಸೀಳುತ್ತಿದ್ದಾಗ ಸಿಗುರು ಕಣ್ಣಿಗೆ ಹಾರಿ ಒಂದು ಕಣ್ಣು ಕುರುಡಾಯಿತು : 42 ವರ್ಷಗಳ ನಂತರ ಈಚೆಗೆ ಸೌದೆ ಸೀಳುತ್ತಿದ್ದಾಗ ತಿರುಗಿ ಸಿಗುರು ಆ ಕಣ್ಣಿಗೆ ತಗಲಿ ಮತ್ತೆ ದೃಷ್ಟಿ ಬಂದಿತು.

oo

ದಿವ್ಯವಾಣಿ

ಮಾಡದೇ ಸುಮ್ಮನೇ ಯೋಚಿಸುತ್ತಿರುವವನು, ಯೋಚನೆಯಿಲ್ಲದೇ ಮಾಡುವವನಷ್ಟೇ ದೊಡ್ಡ ದಡ್ಡನು. — ಚಿಂಗ್ ಚಾ

oo

.... ವಿನೋದ ....

ಡಾಕ್ಟರ್— ಉಸಿರನ್ನು ದಿರ್ಘವಾಗಿ ಎಳೆದು, 3 ಸಾರಿ 9 ಎಂದು ಹೇಳಿ.
ರೋಗಿ— ಇಪ್ಪತ್ತೇಳು.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಕೀರ್ತಿಯುತ 4 ನೇ ವಾರ

ಜಬ್ ಪ್ಯಾರ್ ಕಿಸೀಸೆ ಹೋತಾಹೈ

ದೇವ್‌ಆನಂದ್, ಆಶಾ ಪರೇಖ್ ಮತ್ತಿರ ಪ್ರಖ್ಯಾತ ತಾರೆಯರು ಪಾತ್ರವಹಿಸಿರುವ

ಅತ್ಯಂತ ಮನರಂಜನೆಯ ಹಿಂದಿ ಚಿತ್ರ [ದಿನವಹಿ 3 ಪ್ರದರ್ಶನಗಳು

ಆಪೆರಾ— 29-12-61 ರಿಂದ

ನಾಗಾರ್ಜುನ (ಕನ್ನಡ)

ತಾರಾಗಣ— ರಾಜಕುಮಾರ್, ನಾಗಯ್ಯ, ವಂಚಲಕ್ಷ್ಮಿ, ಹರಿಣಿ, ನರಸಿಂಹರಾಜು
ಕಾಂತಾ ರಾವ್, ರಾಜನಾಲ [ದಿನವಹಿ 3 ಆಟಗಳು]

Help ' The Gorakshana '

Advertise in Goraksana and help the pious cause.

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರ
ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನ ಮತ್ತು ಪ್ರಕಟಿಸಲು ಅನುಕೂಲವಾದ
ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು 4

For Quality Printing
L. N. Press
Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅಶೋಕಾ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್ ಮೈಸೂರು



ಅಮೇರಿಕಾದಲ್ಲಿ ವಿದ್ಯಾರ್ಥಿ ಜೀವನ ' ಪ್ರದರ್ಶನದ ಒಂದು ದೃಶ್ಯ

Edited, Printed & Published by the Proprietor, Dharma Prachara Nirata M. S. Krishna Rao. at the Satyavadi Press Chamarajapuram, Mysore 4.